3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ.
ಸಿ.ಸಿ.ಃ 58/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಹೆಚ್ ಆರ್ ಸುರೇಶ್ | ಸಿಡಬ್ಲ್ಯೂ - 3 |
| ತಂದೆ/ಗಂಡನ ಹೆಸರು | ಃ | ರಂಗೇಗೌಡ | ಪಿ ಡಬ್ಲ್ಯೂ 4 |
| ವಯಸ್ಸು | ಃ | 55 ವರ್ಷ | |
| ಉದ್ಯೋಗ | ಃ | ವ್ಯವಸಾಯ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಹೆಚ್ ಹೊನ್ನೇನಹಳ್ಳಿ | ದಿನಾಂಕಃ 03-07-2019 |

<u>ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದಃ</u>

ದಿನಾಂಕ 21-1-2012 ರಂದು ನಾನು ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ . ಈಗ ಸದರಿ ಮಹಜರ್ ನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು . ಸದರಿ ಮಹಜರ್ ಗೆ ನಾನು ಬೂಕ ಗ್ರಾಮದ ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಹತ್ತಿರ ಸಹಿ ಮಾಡಿರುತ್ತೇನೆ . ಸುಮಾರು ಮಧ್ಯಾಹ್ನ 1 ರಿಂದ 2 ಗಂಟೆ ಸಮಯದಲ್ಲಿ ಪೋಲಿಸರು ಚಿನ್ನದ ಸರ ಕಳ್ಳತವಾದ ಬಗ್ಗೆ ಸ್ಥಳ ಮಹಜರ್ ನ್ನು ಮಾಡಲು ಬಂದಿದ್ದರು. ನನ್ನ ಜೊತೆ ಸ್ಥಳ ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

<u>ಪಾಟೀ ಸವಾಲು ಃ- ನುರಿತ ಎ.ಪಿ.ಪಿ. ಯವರಿಂದ</u>

ದಿನಾಂಕ 21-1-2012 ರಂದು ಪೋಲಿಸರು ಸ್ಥಳ ಮಹಜರ್ ನ್ನು ಮಾಡಿರುತ್ತಾರೆಂದರೆ ಸರಿ ಪೋಲಿಸರು ಸ್ಥಳ ಮಹಜರ್ ಮಾಡುವಾಗ ಮಧ್ಯಾಹ್ನ 3 ರಿಂದ 3-45 ಗಂಟೆ ಸಮಯ ಆಗಿತ್ತು ಎಂದರೆ ಸರಿ . ಚಾಸಾ-1 ರವರು ಹಾಜರಿದ್ದು ಪೋಲಿಸರಿಗೆ ಘಟನೆ ನೆಡೆದ ಸ್ಥಳ ತೋರಿಸಿರುತ್ತಾರೆಂದರೆ ಸರಿ . ನನ್ನೊಂದಿಗೆ ಚಾಸಾ-1 ಮತ್ತು 4 ರವರು ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತಾರೆಂದರೆ ಸರಿ .

<u>ಪಾಟೀ ಸವಾಲು ಃ- ಆರೋಪಿ ಪರ ವಕೀಲರಿಂದ ಇಲ್ಲ</u>

<u>ಮರು ವಿಚಾರಣೆ ಃ ಇಲ್ಲ</u>

ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಸ.ಇ.ಎ.ಒ.,

3ನೇ ಅಧಿಕ ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ